ಮೂಲ ದಾವಾ ನಂಃ136/2024

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **18.12.2025.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಂ.ಎಂ 1 ರಿಂದ 4 ನೇ ಪ್ರತಿವಾದಿಯರ ಪರ ವಕೀಲರಿಂದಃ**

1 ನೇ ಪ್ರತಿವಾದಿಯ ಗಂಡ ಮತ್ತು 2 ರಿಂದ 4 ನೇ ಪ್ರತಿವಾದಿಯ ತಂದೆ ಪರಮೇಶ್ವರವರಿಗೆ ಓದು ಬರಹ ಬರುತ್ತಿರಲಿಲ್ಲ ಎಂದರೆ ಸರಿ. ಅದೇ ರೀತಿ 1 ರಿಂದ 4 ನೇ ಪ್ರತಿವಾದಿಯರಿಗೂ ಓದು ಬರಹ ಬರುವುದಿಲ್ಲ ಎಂದರೆ, ನನಗೆ ಗೊತ್ತಿಲ್ಲ. ಖರೀದಿ ಪತ್ರವನ್ನು 3 ತಿಂಗಳ ಒಳಗಾಗಿ ಮಾಡಿಕೊಡಬೇಕೆಂದು ಹೇಳಿದ್ದೇವು, ಆದರೆ ಅದನ್ನು ಕರಾರು ಪತ್ರದಲ್ಲಿ ಬರೆಸಿದ್ದು ಇರುವುದಿಲ್ಲ. ಕರಾರನ್ನು ನೋಂದಣಾಧಿಕಾರಿ ಕಚೇರಿಯಲ್ಲಿ ನೊಂದು ಮಾಡಿಲಸು ತೊಂದರೆ ಇರಲಿಲ್ಲ. ಕರಾರು ಪತ್ರಕ್ಕೆ 3 ಮತ್ತು 4 ನೇ ಪ್ರತಿವಾದಿಯ ಸಹಿ ಇಲ್ಲ ಎಂದರೆ ಸರಿ. ಆಗ ಅವರು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಪರಮೇಶ್ವರ ಜೀವಂತ ಇರುವಾಗಲೇ ಈ ದಾವೆಯನ್ನು ದಾಖಲು ಮಾಡಲು ತೊಂದರೆ ಇರಲಿಲ್ಲ. ಮೃತ ಪರಮೇಶ್ವರನಿಗೆ ಜಮೀನನ್ನು ಮಾರಾಟ ಮಾಡುವ ಪ್ರಸಂಗ ಬಂದಿದ್ದು ಇರುವುದಿಲ್ಲ ಎಂದರೆ, ಸಾಕ್ಷಿಯು ಅವರ ಮಗಳ ಮದುವೆಯ ಸಲುವಾಗಿ ಸಾಲ ಮಾಡಿದ್ದಾಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಮೃತ ಪರಮೇಶ್ವರವರ ಅನಕ್ಷರತೆಯ ಗೈರು ಫಾಯಿದೆಯನ್ನು ಪಡೆದುಕೊಂಡು, ನಿಪಿ.2 ನ್ನು ಸೃಷ್ಟಿಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸದರಿಯವರು ಯಾವುದೇ ಕಾಲಕ್ಕೂ ಜಮೀನನ್ನು ಖರೀದಿಗೆ ಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ , ಸದರಿಯವರು ನಮ್ಮಿಂದ ಯಾವುದೇ ಕಾಲಕ್ಕೂ 2,00,000/- ಲಕ್ಷ ರೂಪಾಯಿ ಮುಂಗಡ ಹಣವನ್ನು ಪಡೆದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಹೇಗಾದರೂ ಮಾಡಿ , ಪ್ರತಿವಾದಿಯರ ಆಸ್ತಿಯನ್ನು ನುಂಗಿ ಹಾಕಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**